567

ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಯವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲ ವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆಬಾ ಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದ ಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠಿಬಾಡಿಗೆ.

8. ಮೇಲಿನ ನಿಕರ್ಷಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾರಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟ್ಯ ಬಂದಕ್ಕೆ ಬಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಲಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟ್ಯ ವಂದಕ್ಕೆ 8 ಆಣೆಗಳ ಮೇರೆ ಕೋಠೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಕ್ಷೇರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್ಪೆಕ್ಟರ್ ಜನರಲ್‌ರವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಬಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇಜಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸಿನ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸಗಳೂ ಪ್ರಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ ಶೀವೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬೂಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇಜಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮಂಜೂರಾತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇಜಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವ್ಯಂಟುಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಅಕ್ಟೋಬರ್ 1896.

ಬೆಂಗಳೂರು ಡಿಸ್ಟ್ರಿಕ್ಟ್ 1ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ಸ್ ಎಸ್. ನರಸಿಂಹಯ್ಯಂಗಾರ್ಯವರು ಸೆಪ್ಟಂಬರ್ 17ನೇ ತಾರೀಖಿನಲ್ಲಿ ತಮ್ಮ ಮನೆಯ ಆಫಿಸ್ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಿಗಿನ ಷ್ಯೀಲಿನಲ್ಲಿ ಕಂಡ ಘಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನ ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಸೀಲ್.)

ಪಿ. ಆರ್. ಅಂಡ್ ಸನ್ಸ್, ರೈಲ್ವೆ ರೆಗ್ಯುಲೇಟರ್ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು ಇದೆ. ಇದರ ಕ್ರಯ 25 ರೂಪಾಯಿ.

ಇದಕ್ಕೆ ಹಾಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ವಂದುಕಡೆ ಹಿತ್ತಾಳೆ ಉಂಗ್ರವು ಮತ್ತೊಂದುಕಡೆ ಭಂಗಾರದ ಉಂಗ್ರವು ಹಾಕಿದ್ದಾಗಿಯೂ ಇದೆ. ಇದು 9 ಇಂಚ್ ಉದ್ದ ಅಗಲ $\frac{3}{4}$ ಇಂಚ್ ಉಳ್ಳದ್ದಾಗಿಯೂ ಇದೆ. ಇದರ ಕ್ರಯ 40 ರೂಪಾಯಿಗಳು.

ಡನಿಂಗ್,
ಸೂಪರಿಂಟೆಂಡೆಂಟ್ ಆಫ್ ಪೋಲೀಸ್.